ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	687 (840)
ಸದಸ್ಯರ ಹೆಸರು	:	ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	15-12-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2019-20ನೇ ಸಾಲಿಗೆ ಎಸ್.ಎಫ್.ಸಿ ಅನುದಾನದಡಿಯಲ್ಲಿ ಪೌರಾಡಳಿತ ಇಲಾಖೆಗೆ ಬಿಡುಗಡೆಯಾಗಿರುವ ಮೊತ್ತ ಎಷ್ಟು;</td><td>2019-20ನೇ ಸಾಲಿನಲ್ಲಿ ಎಸ್.ಎಫ್.ಸಿ ಅನುದಾನದಡಿಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)
<table><tr><th>ಅನುದಾನ</th><th>ಹಂಚಿಕೆ</th><th>ಬಿಡುಗಡೆ</th></tr><tr><td>ಎಸ್.ಎಫ್.ಸಿ ಮುಕ್ತನಿಧಿ ಅನುದಾನ</td><td>57492.00</td><td>50192.19</td></tr><tr><td>ಎಸ್.ಎಫ್.ಸಿ ಕುಡಿಯುವ ನೀರುಅನುದಾನ</td><td>5428.00</td><td>5428.00</td></tr><tr><td>ಎಸ್.ಎಫ್.ಸಿ ವಿಶೇಷ ಅನುದಾನ</td><td>57365.00</td><td>12952.24</td></tr></table></td></tr>
<tr><td>(ಆ)</td><td>ಈ ಹಣವನ್ನು ಯಾವ ಮಾನದಂಡದ ಅಡಿಯಲ್ಲಿ ಎಲ್ಲಾ ಪಟ್ಟಣ ಪಂಚಾಯಿತಿ. ಪುರಸಭೆ. ನಗರಸಭೆಗಳಿಗೆ ಹಂಚಿಕೆ ಮಾಡಲಾಗಿದೆ;</td><td>➢ ಎಸ್.ಎಫ್.ಸಿ ಮುಕ್ತನಿಧಿ ಅನುದಾನ:-4ನೇ ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವ ಮಾನದಂಡಗಳ ಅನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಣಕಾಸು ಆಯೋಗದಡಿಯಲ್ಲಿ ಅನುದಾನ ಹಂಚಿಕೆ ಮಾಡಲಾಗುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ 2011ರ ಜನಸಂಖ್ಯೆ, ಭೌಗೋಳಿಕ ವಿಸ್ತೀರ್ಣ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಮತ್ತು ಅನಕ್ಷರಸ್ಥರ ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ/66/ಎಸ್ಎಫ್ಸಿ/2014 ದಿ: 26-05-2014ರಲ್ಲಿ ಆದೇಶಿಸಿರುವಂತೆ ಈ ಕೆಳಕಂಡ ಮಾನದಂಡದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲಾಗುತ್ತಿದೆ.

• ಜನಸಂಖ್ಯೆ - 40%
• ಭೌಗೋಳಿಕ ವಿಸ್ತೀರ್ಣ - 20%
• ಪ.ಜಾತಿ/ಪ.ಪಂಗಡ ಜನಸಂಖ್ಯೆ - 20%
• ಅನಕ್ಷರಸ್ಥರು - 20%
ಒಟ್ಟು - 100%

➢ <u>ಎಸ್.ಎಫ್.ಸಿ ಕುಡಿಯುವ ನೀರು ಅನುದಾನ:-</u> ಈ ಅನುದಾನವನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಅಗತ್ಯವಿರುವ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರು ಮಾಡಲಾಗುತ್ತಿದೆ.

➢ <u>ಎಸ್.ಎಫ್.ಸಿ ವಿಶೇಷ ಅನುದಾನ:-</u> ಈ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳ ವಿವೇಚನೆಯನುಸಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಗರ ಸ್ಥಳೀಯ ಸಂಸ್ಥೆಗಳಿಗೆ ಮಂಜೂರು ಮಾಡಲಾಗುತ್ತಿದೆ.</td></tr>
</table>

(ಇ)	ಈ ಹಂಚಿಕೆಯಲ್ಲಿ ಡಾ: ನಂಜುಂಡಪ್ಪ ವರದಿ ಅನ್ವಯ ಅತೀ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷವಾದ ಒತ್ತು ನೀಡಲಾಗಿದೆಯೇ? (ವಿವರಗಳನ್ನು ಒದಗಿಸುವುದು)	ಸರ್ಕಾರದಿಂದ ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳನ್ವಯ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಮುಕ್ತನಿಧಿ ಅನುದಾನ, ಎಸ್.ಎಫ್.ಸಿ ಕುಡಿಯುವ ನೀರು ಅನುದಾನ ಹಾಗೂ ಎಸ್.ಎಫ್.ಸಿ ವಿಶೇಷ ಅನುದಾನಗಳನ್ನು ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುತ್ತಿರುತ್ತದೆ.

ಕಡತ ಸಂಖ್ಯೆ:ನಅಇ 425 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ
ರೇಷ್ಮೆ ಸಚಿವರು